

## ಪೊಲೀಸ್ ಪ್ರೀತಿಯ 'ರಿಷಿ'

'ಪೊಲೀಸರು ಕೂಡ ಮನುಷ್ಯರು ಎಂಬುದನ್ನೇ ಒಮ್ಮೊಮ್ಮೆ ಸಮಾಜ ಮರೆತುಬಿಡುತ್ತದೆ. ಆದರೆ ಒಬ್ಬ ನಟನಾಗಿ ನಾನು ಪೊಲೀಸ್ ಪಾತ್ರ ಮಾಡುವಾಗ, ಪೊಲೀಸರ ಬಗೆಗಿನ ಹೆಮ್ಮೆ, ಪ್ರಾಮಾಣಿಕತೆ, ನಿಸ್ವಾರ್ಥ ಸೇವೆ ನನ್ನನ್ನು ಆವರಿಸುತ್ತದೆ. ನಾವು ಇನ್ನಷ್ಟು ಸಿನಿಮಾಗಳಲ್ಲಿ ಪೊಲೀಸರ ಬಗ್ಗೆ ಪಾಸಿಟಿವ್ ಮಾತುಗಳನ್ನು ಆಡಬೇಕಿದೆ. ಅವರ ಕಾರ್ಯಗಳನ್ನು ತೋರಬೇಕಿದೆ' ಎಂದು ಪೊಲೀಸ್ ವೃತ್ತಿಯ ಬಗ್ಗೆ ಪ್ರೀತಿಯ ಮಾತುಗಳನ್ನಾಡಿದ್ದಾರೆ ನಟ ರಿಷಿ.

2019ರಲ್ಲಿ 'ಕವಲುದಾರಿ' ಸಿನಿಮಾದಲ್ಲಿ ಪೊಲೀಸ್ ಪೋಷಾಕು ಧರಿಸಿದ್ದ ನಟ ರಿಷಿಗೆ ಆನಂತರ ಪೊಲೀಸ್ ಪಾತ್ರಗಳ ಅವಕಾಶಗಳು ಹೆಚ್ಚು ಬರಲಾರಂಭಿಸಿದವು. ಆದರೆ ಒಂದೇ ರೀತಿಯ ಪಾತ್ರಗಳಿಗೆ ಒಳಗಾಗಿಬಿಡುವ ಭಯದಿಂದ ದೂರವುಳಿದಿದ್ದ ಅವರು, ಇದೀಗ ಮತ್ತೆ ಪೊಲೀಸ್ ಆಗಲು ಹೊರಟಿದ್ದಾರೆ.

'ರುದ್ರ ಗರುಡ ಪುರಾಣ' ಸಿನಿಮಾದಲ್ಲಿ ಪೊಲೀಸ್ ಪಾತ್ರಕ್ಕೆ ಬಣ್ಣ ಹಚ್ಚಿರುವ ಅವರು, 'ರುದ್ರ ಪಾತ್ರ ವೈರುಧ್ಯವಾಗಿದೆ ಹಾಗೂ ಈ ಪಾತ್ರ ಪೋಷಣೆ ಸಿನಿಮಾವನ್ನು ಬೇರೆಯದೇ ರೀತಿ ಬಿಂಬಿಸಲಿದೆ. ಹೈ ಇಂಟೆನ್ಸಿಟಿ ಆ್ಯಕ್ಷನ್ ದೃಶ್ಯಗಳು ಈ ಸಿನಿಮಾದಲ್ಲಿದ್ದು, ಸಮಾಜದಲ್ಲಿನ ಕೆಲ ವಿದ್ಯಮಾನಗಳ ಕುರಿತದ್ದಾಗಿದೆ' ಎಂದಿದ್ದಾರೆ.

ಕೆ.ಎಸ್. ನಂದೀಶ್ ಈ ಚಿತ್ರ ನಿರ್ದೇಶನ ಮಾಡಲಿದ್ದಾರೆ. ಪ್ರಿಯಾಂಕಾ ಕುಮಾರ್ ಅವರೊಂದಿಗೆ ಮೊದಲ ಬಾರಿ ಕನ್ನಡ–ತೆಲುಗು ದ್ವಿಭಾಷಾ ಚಿತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ ರಿಷಿ. ■

## 'ಪಾತ್ರಕ್ಕಿಂತ, ಸಿನಿಮಾ ಕಥೆಯೇ ನನಗೆ ಮುಖ್ಯ



ಸ್ನಿಗ್ಧ ಸುಂದರಿ ರುಕ್ಮಿಣಿ ವಸಂತ್ ಚಂದನವನದಲ್ಲಿ ಮಾತ್ರವಲ್ಲ, ತಮಿಳು ಚಿತ್ರರಂಗದಲ್ಲೂ ತಮ್ಮ ರುಜು ಹಾಕಲು ಹೊರಟಿದ್ದಾರೆ. ನಟ ವಿಜಯ್ ಸೇತುಪತಿ ಅವರೊಂದಿಗೆ ತಮಿಳಿನ ತಮ್ಮ ಚೊಚ್ಚಿಲ ಸಿನಿಮಾ ಮಾಡುತ್ತಿದ್ದು, ಹೊಸ ಕಲಿಕೆಗಳಿಗೆ ತಮ್ಮನ್ನು ತಾವು ಒಡ್ಡಿಕೊಂಡಿದ್ದಾರೆ.

ಈಚೆಗೆ ನಟ ಶಿವರಾಜ್ ಕುಮಾರ್ ಅಭಿನಯದ 'ಭೈರತಿ ರಣಗಲ್' ಸಿನಿಮಾಕ್ಕೆ ನಾಯಕ ನಟಿಯಾಗಿ ಆಯ್ಕೆಯಾಗಿರುವ ರುಕ್ಮಿಣಿ ವಸಂತ್, ಕೆಲವು ತಿಂಗಳ ಅಂತರದಲ್ಲೇ ಆರನೇ ಸಿನಿಮಾಕ್ಕೆ ಸಹಿ ಹಾಕಿದ್ದಾರೆ. 'ಭೈರತಿ ರಣಗಲ್', ಅವರ ಹೊಸ ಸಿನಿಮಾ ಆಗಿದ್ದು, ನಟ ಶಿವರಾಜ್ ಕುಮಾರ್ ಜೊತೆ ನಟಿಸಲು ಉತ್ಸುಕರಾಗಿದ್ದಾರೆ.

'ನಿರ್ದೇಶಕ ನರ್ತನ್ ಅವರಿಂದ ಸಿನಿಮಾ ಕುರಿತು ನನಗೆ ಕರೆ ಬಂದಾಗ ಆಶ್ಚರ್ಯವಾಯಿತು. ಆ ಸಿನಿಮಾ ಹಾದಿ ನನಗೆ ಇಷ್ಟವಾಯಿತು' ಎಂದಿದ್ದಾರೆ.

ಇದೇ ಸಂದರ್ಭ, ತಾವು ಸಿನಿಮಾ ಆರಿಸಿಕೊಳ್ಳಲು ಅನುಸರಿಸುವ ಮಾನದಂಡದ ಕುರಿತು ಮಾತು ಹಂಚಿಕೊಂಡಿದ್ದಾರೆ. 'ಸಿನಿಮಾದಲ್ಲಿ ನನ್ನ ಪಾತ್ರಕ್ಕಿಂತ ಮೊದಲು ಕಥೆಯನ್ನು ಗಮನಿಸುತ್ತೇನೆ. ಆನಂತರ ಆ ಕಥೆಗೆ ನನ್ನ ಪಾತ್ರ ಏನು ಕೊಡುಗೆ ನೀಡಲಿದೆ ಎಂಬುದನ್ನು ತಿಳಿಯುತ್ತೇನೆ. ಕೊನೆಗೆ ಸಿನಿಮಾ ಆಯ್ಕೆ' ಎಂದು ಹೇಳಿದ್ದಾರೆ.

ರುಕ್ಮಿಣಿ ವಸಂತ್ ನಟಿಸಿರುವ, 'ಸಪ್ತ ಸಾಗರದಾಚೆ ಎಲ್ಲೋ', 'ಬಾನದಾರಿಯಲ್ಲಿ', 'ಬಘೀರ' ಸಿನಿಮಾಗಳು ಬಿಡುಗಡೆ ಹಾದಿಯಲ್ಲಿವೆ. 'ಭೈರತಿ ರಣಗಲ್', 'ಮಫ್ತಿ' ಚಿತ್ರದ ಹಿಂದಿನ ಕಥೆಯಾಗಿದೆ. ಈ ಚಿತ್ರದ ಮಧ್ಯಂತರದ ನಂತರ ಭೈರತಿ ರಣಗಲ್ ಪಾತ್ರ ಬರುತ್ತದೆ. ಪ್ರೀಕ್ವೆಲ್ ಭಾಗದಲ್ಲಿ ಭೈರತಿ ರಣಗಲ್ ಆಗಿದ್ದು ಹೇಗೆಂಬ ಕಥೆ ಇರಲಿದೆ ಎಂದು ನಿರ್ದೇಶಕ ನರ್ತನ್ ಹೇಳಿದ್ದಾರೆ.

■